## ಕಳೆದ ಸಂಚಿಕೆಯಲ್ಲಿ



ವಿಶೇಷ ಕಾಕ್‌ಟೇಲ್ ಅಮಲಿನಲ್ಲಿ ಮೈಥಿಲಿಯೊಂದಿಗೆ ಸೋನಾ ಸುಖದ ಅನ್ವೇಷಣೆಯಲ್ಲಿ ತೊಡಗಿಕೊಂಡ. ಲೆವಿನ್ಸ್ ಹಾಗೂ ಪೂರ್ವಿಕಾ ಅವರದ್ದೂ ಅದೇ ಹುಡುಕಾಟವಾಗಿತ್ತು. ಇತ್ತ ಮುಂಬಯಿಯಲ್ಲಿ ಪೂರ್ವಿಕಾಳ ತಂದೆಯ ಮನೆಯ ಮೇಲೆ ಸಿಬಿಐ, ಇ.ಡಿ. ದಾಳಿ ನಡೆಯಿತು. ಅದೇ ಸಮಯಕ್ಕೆ ಗುಲ್ಶನ್ ಕುಮಾರ್ ಎನ್ನುವ ವ್ಯಕ್ತಿ ಗುನ್ನಾಲಾಲ್‌ಗೆ ಕರೆ ಮಾಡಿ, ತನ್ನ ತಮ್ಮನ ಮಗನಿಗೂ ಪೂರ್ವಿಕಾಳಿಗೂ ಇದ್ದ ಅಫೇರ್ ಬಗ್ಗೆ ತಿಳಿಸಿದ. ಮರುದಿನದ ಮಾತುಕತೆಯಲ್ಲಿ, ಪೂರ್ವಿಕಾಳೊಂದಿಗಿನ ಸಂಬಂಧ ಕಡಿದುಕೊಳ್ಳುವುದೇ ಉತ್ತಮವೆಂದು ಗುಲ್ಶನ್ ಸೂಚಿಸಿದ. ಇತ್ತ ಲಾಸ್ ವೇಗಾಸ್‌ನಿಂದ ಬೀಳ್ಕೊಳ್ಳುವ ಸಮಯದಲ್ಲಿ ಸೋನಾನ ಮನಸ್ಸಿನಲ್ಲಿ ದೊಡ್ಡ ತಾಕಲಾಟ ನಡೆಯತೊಡಗಿತ್ತು. ಅರಿತೋ ಅರಿಯದೆಯೋ ನಡೆದ ದೈಹಿಕ ಸಂಪರ್ಕ ಅವನೊಳಗೆ ನೈತಿಕತೆ ಕುರಿತ ಪ್ರಶ್ನೆಗಳನ್ನು ಎಬ್ಬಿಸಿತ್ತು. ಅವನ ಅನ್ಯಮನಸ್ಕತೆ ಗಮನಿಸಿದ ಮೈಥಿಲಿ, ಸುಖದ ಬೆನ್ನಿಗೆ ಸೂತಕದ ಛಾಯೆ ಅಂಟಿಕೊಳ್ಳದಂತೆ ಎಚ್ಚರವಹಿಸಬೇಕೆಂದು ಕಿವಿಮಾತು ಹೇಳಿದಳು. ಪೂರ್ವಿಕಾ ಕೂಡ ದೇಹದ ಕೆಮಿಸ್ಟ್ರಿಯ ಸೂತ್ರಗಳನ್ನು ಸೋನಾನಿಗೆ ಮನದಟ್ಟು ಮಾಡಿಸಲು ಪ್ರಯತ್ನಿಸಿದಳು.

ಮಾಡುವಾಗ ಆಸ್ಕರ್ ವೈಲ್ಡನಿಗೆ ಬಿಎ ಡಿಗ್ರಿ ಇಂಗ್ಲಿಷ್ ಹಾನರ್ಸ್‌ನಲ್ಲಿ ಎರಡೂವರೆ ವರ್ಷ ಸಹಪಾಠಿಯಾಗಿದ್ದ ಪ್ರಿಯಾಂಕಾ ಅಗರ್ವಾಲ್ ನೆನಪಾದಳು. ತರಗತಿಯಲ್ಲಿ ಅವಳು ಯಾರೊಂದಿಗೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಯಾರಾದರೂ ಮಾತನಾಡಿಸಿದರೆ ಚುಟುಕಾಗಿ ಉತ್ತರಿಸಿ ಬೇಗನೆ ಮಾತು ಮುಗಿಸುತ್ತಿದ್ದಳು. ಆಸ್ಕರ್ ವೈಲ್ಡ್ ಎರಡೂವರೆ ವರ್ಷದಲ್ಲಿ ಆರೇಳು ಸಾರಿ ಮಾತನಾಡಿದ್ದನೇನೋ. ನೋಡಲು ಸುಂದರವಾಗಿಯೂ ಇದ್ದಳು. ಮಾಸ್ತರರೊಂದಿಗೆ ಸುಲಲಿತವಾಗಿ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದಳು. ಮೊದಲನೆಯ ಮತ್ತು ಎರಡನೆಯ ವರ್ಷಗಳ ಪರೀಕ್ಷೆಗಳಲ್ಲೂ ಪ್ರಿಯಾಂಕಾ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಳು. ಅಂತಿಮ ವರ್ಷದ ಮೊದಲನೆಯ ಸೆಮಿಸ್ಟರ್ ಪರೀಕ್ಷೆಗೆ ಹಾಜರಾದವಳು ಮತ್ತೆ ಕ್ಲಾಸಿಗೆ ಬಂದಿರಲಿಲ್ಲ. ಬಹುಶಃ ಮದುವೆ ಸೆಟ್ ಆಗಿರಬಹುದೆಂದು ತರಗತಿಯಲ್ಲಿ ಮಾತನಾಡಿಕೊಳ್ಳುವುದು ಆಸ್ಕರ್ ವೈಲ್ಡನ ಕಿವಿಗೂ ಬಿದ್ದಿತ್ತು. ಕ್ರಮೇಣ 'ಔಟ್ ಆಫ್ ಸೈಟ್ ಈಸ್ ಔಟ್ ಆಫ್ ಮೈಂಡ್' ಎನ್ನುವಂತೆ ಅವಳು ಮರೆತುಹೋಗಿದ್ದಳು. ಇಂದು ಏಕೋ ಅವಳನ್ನು ನೋಡಿ ಮಾತನಾಡಿಸಬೇಕೆಂಬ ಹಂಬಲ ತೀವ್ರವಾಗಿ ಹುಟ್ಟಿಕೊಂಡಿತು. ಅಂದು ಹನ್ನೊಂದು ಗಂಟೆಗೆಲ್ಲ ಆಸ್ಕರ್ ವೈಲ್ಡ್ ಕಾಲೇಜಿನ ಬಳಿ ಹೋಗಿದ್ದ. ಅಡ್ಮಿನಿಸ್ಟ್ರೇಷನ್ ವಿಭಾಗಕ್ಕೆ ಹೋಗಿ ಅವಳ ಅಡ್ಮಿಷನ್ ವಿವರಗಳನ್ನು ತೆಗೆಸಿದ್ದ. ಪ್ರಿಯಾಂಕಾ ಅಗರ್ವಾಲ್ ಮುಂಬಯಿಯ ಅತ್ಯಂತ ಶ್ರೀಮಂತ ಬಡಾವಣೆಗಳಲ್ಲೊಂದಾದ ಬಾಂದ್ರಾದ ಲಿಂಕಿಂಗ್ ರಸ್ತೆಯಿಂದ ಬರುತ್ತಿದ್ದಳು. ತಂದೆ ರಿವಾನ್ ಅಗರ್ವಾಲ್ ವ್ಯಾಪಾರಿ ಎಂತಲೂ, ತಾಯಿ ಸುಷ್ಮಾ ಅಗರ್ವಾಲ್ ಹೌಸ್ ವೈಫ್ ಎಂತಲೂ ಅಡ್ಮಿಷನ್ ರಿಜಿಸ್ಟರ್‌ನಲ್ಲಿ ನಮೂದಾಗಿತ್ತು. ಅಡ್ರೆಸ್ ವಿವರಗಳನ್ನು ಪಡೆದು, ಅಲ್ಲಿನ ಉಪನ್ಯಾಸಕರನ್ನು ಮಾತನಾಡಿಸಿಕೊಂಡು ಮನೆಗೆ ಬಂದ ಆಸ್ಕರ್ ವೈಲ್ಡ್ ಊಟ ಮಾಡಿ, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮೂರು ಗಂಟೆಗೆ ಬಾಂದ್ರಾದ ಕಡೆ ಕಾರು ಚಲಾಯಿಸಿದ್ದ. ನಲವತ್ತು ನಿಮಿಷಗಳ ಪ್ರಯಾಣದ ಬಳಿಕ ಕಾರು ಬಾಂದ್ರಾದ ಲಿಂಕಿಂಗ್ ರಸ್ತೆಯ ಭವ್ಯವಾದ ಬಂಗಲೆಯ ಮುಂದೆ ನಿಂತಿತ್ತು.

ದೊಡ್ಡ ಕಾಂಪೌಂಡ್‌ನಲ್ಲಿ ವಿವಿಧ ಬಗೆಯ ಬಣ್ಣ ಬಣ್ಣದ ಹೂವಿನ ಗಿಡಗಳು ನಳನಳಿಸುತ್ತಿದ್ದವು. ಸೆಕ್ಯುರಿಟಿಯವರಿಗೆ ತನ್ನ ಪರಿಚಯ ಹೇಳಿದ್ದ ಆಸ್ಕರ್ ವೈಲ್ಡ್. ಚೀಫ್ ಸೆಕ್ಯುರಿಟಿಯವನು ಇಂಟರ್ ಕಾಮ್‌ನಲ್ಲಿ ಮನೆಯ ಒಳಗಡೆಯಿದ್ದವರೊಂದಿಗೆ ಮಾತನಾಡಿ, ಅವರು ಸಿಸಿಟಿವಿಯಲ್ಲಿ ಆಸ್ಕರ್ ವೈಲ್ಡನನ್ನು ಒಂದು ನಿಮಿಷ ನೋಡಿದ ಮೇಲೆ ಅದೇ ಚೀಫ್ ಸೆಕ್ಯುರಿಟಿಯವನು ವೈಲ್ಡನನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋಗಿದ್ದ. ಸ್ವಾಗತಕಾರಿಣಿ ನಗುತ್ತಾ ವೈಲ್ಡನನ್ನು ಬರಮಾಡಿಕೊಂಡು ಸೋಫಾದ ಮೇಲೆ ಕೂರಲು ಹೇಳಿದ್ದಳು. ಒಳಗಡೆಯಿಂದ ಶುಭ್ರ ಶ್ವೇತವಸ್ತ್ರಧಾರಿಣಿಯೊಬ್ಬಳು ಮುಖದ ತುಂಬಾ ನಗು ತುಂಬಿಕೊಂಡು ತಟ್ಟೆಯಲ್ಲಿ ನೀರಿನ ಗ್ಲಾಸನ್ನು ಹಿಡಿದು ಬಂದಿದ್ದಳು. ಆಸ್ಕರ್ ವೈಲ್ಡ್ ನೀರಿನ ಗ್ಲಾಸನ್ನು ಎತ್ತಿಕೊಂಡು ಅರ್ಧ ಕುಡಿದು ಅಮೃತ ಶಿಲೆಯಿಂದ ಮಾಡಿದ ಟೀಪಾಯ್ ಮೇಲಿಟ್ಟ. ಐವತ್ತು ವರುಷವಿರಬಹುದಾದ ಹೆಂಗಸೊಬ್ಬರು ಬಂದು ನಮಸ್ಕರಿಸುತ್ತಾ ಎದುರಿಗಿನ ಸೋಫಾದಲ್ಲಿ ಕುಳಿತಿದ್ದರು. ಆಕೆ ಪ್ರಿಯಾಂಕಾಳ ತಾಯಿ. ಆಸ್ಕರ್ ವೈಲ್ಡ್ ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾ ಪ್ರಿಯಾಂಕಾಳನ್ನು ಭೇಟಿಯಾಗಲು ಬಂದಿರುವುದಾಗಿ ತಿಳಿಸಿದ. ಪ್ರಿಯಾಂಕಾ ಎರಡು ವರ್ಷಗಳಿಂದ ದೊಂಬಿವಿಲಿಯಲ್ಲಿ ಇನ್‌ಸ್ಟಿಟ್ಯೂಟ್ ನಡೆಸುತ್ತಿರುವುದಾಗಿಯೂ ತಿಂಗಳಿಗೊಮ್ಮೆ ಮಾತ್ರ ಇಲ್ಲಿಗೆ ಬಂದು ಎರಡು ದಿನ ಇದ್ದು ಹೋಗುತ್ತಾಳೆಂದು ಹೇಳುತ್ತಾ ಪಕ್ಕದ ಗೋಡೆಯ ಮೇಲಿದ್ದ ಹೋಂ ಥಿಯೇಟರ್ ಸ್ಕ್ರೀನ್ ಆನ್ ಮಾಡಿದ್ದಳು. ಅರೆ, ಪ್ರಿಯಾಂಕಾ ಅಗರ್ವಾಲ್ ಪ್ರತ್ಯಕ್ಷಳಾಗಿದ್ದಳು. ಮೊದಲಿಗಿಂತಲೂ ಈಗ ಮೈ ತುಂಬಿಕೊಂಡು ಅಂದವಾಗಿ ಕಾಣುತ್ತಿದ್ದಳು. ಸ್ವಲ್ಪ ಮೈಥಿಲಿಯನ್ನು ಹೋಲುತ್ತಿದ್ದಳು. ಅಮ್ಮನ ಜೊತೆ ಕುಳಿತಿರುವವರು ಯಾರೆಂದು ಕ್ಷಣ ನೋಡಿ ಆಸ್ಕರ್ ವೈಲ್ಡನನ್ನು ನೋಡಿ 'ಹಾಯ್ ಆಸ್ಕರ್, ವ್ಹಾಟ್ ಎ ಸರ್ಪ್ರೈಸ್ ಮ್ಯಾನ್, ಹೌ ಡು ಯು ಡು' ಎಂದು ಮುಖವರಳಿಸಿ ಕೇಳಿದ್ದಳು.

'ಏಕೋ ತುಂಬಾ ನೆನಪಾದೆ ನೀನು. ಇನ್ನರ್ಧ ವರ್ಷ ಮುಗಿಸಿದ್ದರೆ ಹಾನರ್ಸ್ ಇಂಗ್ಲೀಷ್ ಕಂಪ್ಲೀಟ್ ಆಗಿರೋದು. ನೀನು ಲಿಟರೇಚರ್‌ನಲ್ಲಿ ಬ್ರೈಟ್ ಆಗಿದ್ದೆ ಕೂಡ. ಕಾಲೇಜು ಬಳಿ ಹೋಗಿ ಅಡ್ರೆಸ್ ತೆಗೆದುಕೊಂಡು ಬಂದೆ' ನಕ್ಕು ಹೇಳಿದ್ದ.

'ಓ ಮೈ ಗುಡ್‌ನೆಸ್. ಬಿಡು ಅದೆಲ್ಲಾ ಈಗ. ನನಗೆ ಸೈಕಾಲಜಿ ತುಂಬಾ ಕಾಡ್ತಾ ಇತ್ತು. ಅದರಲ್ಲೂ ಸಮ್ಮೋಹನ ವಿದ್ಯೆಯನ್ನು ಹೇಗೆ ಸೈಕಾಲಜಿಯೊಂದಿಗೆ ಲಿಂಕ್ ಮಾಡಬೇಕೆಂಬ ವಿಚಾರ ನಿರಂತರವಾಗಿ ನನ್ನನ್ನು ಕಾಡುತ್ತಿತ್ತು. ಇರಲಿ ಬಿಡು, ಈಗ ದೊಂಬಿವಿಲಿಯಲ್ಲಿ ಒಂದು ಇನ್‌ಸ್ಟಿಟ್ಯೂಟ್ ಸ್ಟಾರ್ಟ್ ಮಾಡಿದ್ದೀನಿ. ಬಂದ್ರೆ ನಿನಗೆಲ್ಲಾ ತಿಳಿಯುತ್ತೆ' ಎಂದಿದ್ದಳು ಉತ್ಸಾಹ ತುಂಬಿಕೊಂಡು.

'ನೀನು ಹೂಂ ಎಂದರೆ ನಾಳೆಯೇ ಬಂದುಬಿಡುತ್ತೇನೆ' ಆತುರ ತೋರಿದ್ದ.

'ಸಾರಿ ಡಿಯರ್, ನಾಳೆ ನಾನು ಫುಲ್ ಬಿಜಿ, ನಾಡಿದ್ದು ಶನಿವಾರ, ಮಾರ್ನಿಂಗ್ ಒಂಬತ್ತು ಗಂಟೆಗೆ ಬ್ರೇಕ್ ಫಾಸ್ಟ್‌ಗೆ ಇಲ್ಲಿಗೇ ಬಂದುಬಿಡು. ಮಾತನಾಡೋಣ. ಈಗ ಒಂದು ಇಂಟವ್ರ್ಯೂ ಇದೆ, ಬೈ' ಎಂದು ಪರದೆಯ ಮೇಲಿಂದ ಮಾಯವಾಗಿದ್ದಳು.

'ನೀವು ಕ್ರಿಶ್ಚಿಯನ್ನರಾ?' ಕೇಳಿದ್ದರು ಪ್ರಿಯಾಂಕಾ ತಾಯಿ ಸುಷ್ಮಾ ಅಗರ್ವಾಲ್.

'ಅಲ್ಲ, ನನ್ನ ಒರಿಜಿನಲ್ ಹೆಸರು ಸೋನಾಲಾಲ್' ಎಂದು ಶುರುಮಾಡಿ ತನ್ನ ತಾತನ ಬಗ್ಗೆ, ತಮ್ಮ ವ್ಯಾಪಾರ ವಹಿವಾಟಿನ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದ ಆಸ್ಕರ್ ವೈಲ್ಡ್.

'ಓಹ್ ತುಂಬಾ ಇಂಟರೆಸ್ಟಿಂಗ್ ಆಗಿದೆಯಲ್ಲ. ಒಂದು ಕನಸಿನಿಂದಾಗಿಯೇ ಹೆಸರು ಬದಲಾಯಿಸಿಕೊಂಡವರನ್ನು ಇದೇ ಮೊದಲ ಬಾರಿ ನೋಡುತ್ತಿರುವುದು ನಾನು. ಆ ಕನಸಿನ ಸುಂದರಿ ನಿನಗೆ ಸಿಕ್ಕಿದಳೋ ಇನ್ನೂ ಇಲ್ಲವೋ' ಎಂದ ಅವರ ತಮಾಷೆಯ ಮಾತುಗಳಲ್ಲಿ ವ್ಯಂಗ್ಯವನ್ನೇನೂ ಗುರುತಿಸಲು ಸಾಧ್ಯವಾಗಿರಲಿಲ್ಲ ಆಸ್ಕರ್ ವೈಲ್ಡನಿಗೆ.

'ಇಲ್ಲ, ಇನ್ನೂ ಹುಡುಕಾಟದಲ್ಲಿಯೇ ಇದ್ದೇನೆ ಆಂಟಿ' ಅವನೂ ಸರಳವಾಗಿ ನಗುತ್ತಾ ಹೇಳಿದ್ದ.

'ಆಗಲಿ, ಸಿಗುತ್ತಾಳೆ ಬಿಡು. ಒಳ್ಳೆಯ ವಸ್ತುಗಳು ನಮಗೆ ಬೇಗನೆ ದಕ್ಕುವುದಿಲ್ಲ. ಬೇಗ ಮದುವೆ ಮಾಡಿಕೊಂಡು ಸೆಟ್ಲಾಗಿ ಬಿಡು ಎಂದು ಪ್ರಿಯಾಂಕಾಗೆ ನಾವೂ ಹೇಳುತ್ತಲೇ ಇದ್ದೇವೆ.